**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯಃ ಬೇಲೂರು**

**ಃಸಿ.ಸಿ. 23/2022**

| | |
|---|---|
| ಪಿರ್ಯಾದಿ | ಃ ವೆಂಕಟೇಶ ಹೆಚ್<br>ಬಿನ್ ಟಿ ಎಸ್ ಹನುಮಂತಪ್ಪ, 35 ವರ್ಷ,<br>ಹಳೇ ಸಂತೆ ಮೈದಾನ, ಜೂನಿಯರ್ ಕಾಲೇಜು<br>ಹಿಂಭಾಗ, ಬೇಲೂರು ಟೌನ್,<br>ಬೇಲೂರು ತಾಲ್ಲೂಕು. |

**ವಿರುದ್ಧ**

| | |
|---|---|
| ಆರೋಪಿ | ಃ ಗಂಗಾ ಕೋಂ. ಮಧುಕುಮಾರ್<br>ವಯಸ್ಕರು, ಚಿಕ್ಕಲಿಂಗನಹಳ್ಳಿ ಗ್ರಾಮ,<br>ಜಾವಗಲ್ ಹೋಬಳಿ,<br>ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ. |

**ಃ ಆರೋಪಣೆಯ ಸಾರಾಂಶ ಃ**

ಆರೋಪಿಯಾದ ನೀವು ದಿನಾಂಕಃ 05-02-2020 ರಂದು ಪಿರ್ಯಾದುದಾರರ ಬಳಿ ಬಂದು ತನ್ನ ವ್ಯಾಪಾರ ಅಭಿವೃದ್ದಿ ಮಾಡಲು ಮತ್ತು ಸಂಸಾರಕ್ಕಾಗಿ ಮಾಡಿರುವ ಕೈಸಾಲ ತೀರಿಸುವ ಉದ್ದೇಶದಿಂದ ರೂ.1,75,000-00 ಸಾಲವಾಗಿ ಹಣ ಕೇಳಿದ್ದು, ಅದರಂತೆ ಅದೇ ದಿನ ಪಿರ್ಯಾದುದಾರರು ಆರೋಪಿಯಾದ ನಿಮಗೆ ಅಂದೇ ರೂ.1,75,000-00 ಗಳನ್ನು ನಗದಾಗಿ ನೀಡಿದ್ದು, ಸದರಿ ಸಾಲವನ್ನು ಮರುಪಾವತಿ ಮಾಡುವ ಉದ್ದೇಶದಿಂದ ಆರೋಪಿಯಾದ ನೀವು ಖಾತೆ ಹೊಂದಿರುವ ವಿಜಯಾ ಬ್ಯಾಂಕ್ ಅರಕೆರೆ ಗ್ರಾಮ ಶಾಖೆಯ ಚೆಕ್ ಸಂಃ 219901 ರೂ. 1,75,000-00 ಮೊತ್ತದ ಚೆಕ್ ನ್ನು ದಿನಾಂಕಃ 29-09-2020 ರಂದು ಅಥವಾ ನಂತರ ಎಂದು ನಮೂದಿಸಿ ಕೊಟ್ಟಿದ್ದು, ಪಿರ್ಯಾದುದಾರರು ಸದರಿ ಚೆಕ್ ನ್ನು ನಗಧೀಕರಿಸಿಕೊಳ್ಳುವ ಉದ್ದೇಶದಿಂದ ಪಿರ್ಯಾದುದಾರರು ಖಾತೆ ಹೊಂದಿರುವ ಕೆನರಾ ಬ್ಯಾಂಕ್ ಬೇಲೂರು ಶಾಖೆಯ ಮೂಲಕ ದಿಃ03-10-2020 ರಂದು ಆರೋಪಿಯಾದ ನಿಮ್ಮ ಬ್ಯಾಂಕ್‌ಗೆ

ಹಾಜರುಪಡಿಸಿದಾಗ ಸದರಿ ಬ್ಯಾಂಕ್ ನವರು ಪರಿಶೀಲಿಸಿ ನೀವು ಕೊಟ್ಟಂತಹ ಚೆಕ್ ನಗದಾಗದೇ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ (**Funds insufficient)** ಎಂದು ದಿನಾಂಕಃ 05–10–2020 ರಂದು ಬಂದ ಹಿಂಬರಹದ ಮೇರೆಗೆ, ಆರೋಪಿಯಾದ ನಿಮಗೆ ತಮ್ಮ ವಕೀಲರ ಮೂಲಕ ದಿನಾಂಕಃ 02–11–2020 ರಂದು ಚೆಕ್ ನಗಧೀಕರಣಗೊಳ್ಳದ ಸಂಗತಿಯನ್ನು ನೋಂದಾಯಿತ ಅಂಚೆ ನೋಟೀಸ್ ನೀಡಿದ್ದು, ಸದರಿ ನೋಟೀಸ್ ಆರೋಪಿಯಾದ ನೀವು ದಿಃ05–11–2020 ರಂದು ಸ್ವೀಕರಿಸಿದ್ದರೂ ಸಹ ಪಿರ್ಯಾದುದಾರರಿಂದ ಸಾಲವಾಗಿ ಪಡೆದ ಹಣವನ್ನು ನೀಡದೇ, ಆರೋಪಿಯಾದ ನಿನ್ನ ಖಾತೆಯಲ್ಲಿ ಸಾಕಷ್ಟು ಹಣವಿಲ್ಲದೇ ಇದ್ದರೂ ಚೆಕನ್ನು ನೀಡಿ ವರ್ಗಾವಣೆಗೊಳ್ಳಬಲ್ಲ ದಸ್ತಾವೇಜುಗಳ ಅಧಿನಿಯಮ ಪ್ರಕರಣ 138 ಸಹವಾಚಕ 142 ರಂತೆ ಅಪರಾಧವನ್ನು ಎಸಗಿರುತ್ತೀಯಾ ಅಂತ ಪಿರ್ಯಾದಿ ಆರೋಪಿಸಿರುತ್ತಾನೆ.

*ಪ್ರಶ್ನೆ ಃ ಈಗ ನಿನಗೆ ಓದಿ ಹೇಳಿ ವಿವರಿಸಿದ ಆರೋಪದ ಅಂಶಗಳು ಅರ್ಥವಾಯಿತೇ?*

*ಉತ್ತರ ಃ*

*ಪ್ರಶ್ನೆ ಃ ನೀನು ಆರೋಪವನ್ನು ಒಪ್ಪುವೆಯೋ ಅಥವಾ ವಿಚಾರಣೆಯಾಗಬೇಕೋ?*
*ಉತ್ತರಃ।*

(ಆಪಾದಿತನಿಗೆ ಆರೋಪದ ಅಂಶವನ್ನು ಓದಿ ಹೇಳಿ ವಿವರಿಸಿದ ಮೇಲೆ ಆತನು ಮೇಲ್ಕಂಡಂತೆ ನೀಡಿದ ಉತ್ತರವನ್ನು ಸ್ವಹಸ್ತಾಕ್ಷರದಿಂದ ಮುಕ್ತ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಗಿದೆ ಎಂದು ದೃಡೀಕರಿಸಲಾಗಿದೆ.)

ಸ್ಥಳ ಃ ಬೇಲೂರು
ದಿನಾಂಕಃ 12–02–2024

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಬೇಲೂರು.